4

# ಬೈಬಲಿನ ವಿಶೇಷ ಗುಣಲಕ್ಷಣಗಳು

ಬೈಬಲಿನ ಕೆಲವು ವಿಶೇಷ ಗುಣಲಕ್ಷಣಗಳು ಅವು ದೈವಿಕ ಮೂಲವನ್ನು ತೋರಿಸುವಷ್ಟು ಗಮನೀಯವಾದವುಗಳಾಗಿವೆ. ಈ ಗುಣಲಕ್ಷಣಗಳು ಆಗಲೇ ಸಂಕ್ಷೇಪವಾಗಿ ನಮೂದಿಸಲ್ಪಟ್ಟಿದ್ದರೂ, ಅವುಗಳು ಹೆಚ್ಚು ವಿವರವಾಗಿ ಶೋಧಿಸಲ್ಪಡಲು ಅರ್ಹವಾಗಿವೆ.

## ವಿವಿಧತೆಯಲ್ಲಿ ಅದರ ಐಕ್ಯತೆ

ಬೈಬಲಿನ ಸ್ಪಷ್ಟವಾದ ಗುಣಗಳಲ್ಲಿ ಒಂದು ಅದರ ಬಹಳವಾದ ವಿವಿಧತೆಯ ಮಧ್ಯದಲ್ಲಿ ಒಂದೇಯಾಗಿರುವಂಥದ್ದು. ಅದರ ರಚನೆಯನ್ನು ಯೋಚಿಸಿರಿ: ಬೈಬಲು ಅರವತ್ತಾರು ಭಾಗಗಳ ರಚನೆಯಾಗಿದೆ, ಒಬ್ಬರಿಗೊಬ್ಬರು ಅಪರಿಚಿತರಾದ - ಬಹುಶಃ ನಾಲ್ವತ್ತು ರಚಯಿತರಿಂದ ಬರೆಯಲ್ಪಟ್ಟಿವೆ - ಮೂರು ಭಾಷೆಗಳಲ್ಲಿ, ಹದಿನೈದು ನೂರು ವರ್ಷಗಳ ಅವಧಿಯಲ್ಲಿ ಬರೆಯಲ್ಪಟ್ಟಿವೆ. ಈ ಜನರು ವಿವಿಧ ಆಡಳಿತೆಗಾರರ ಕೆಳಗೆ (ಅಶ್ಶೂರ್ಯ, ಬಬಿಲೋನಿಯ, ಮೇಡೊ-ಪರ್ಶಿಯ, ಗ್ರೀಕ್ ಮತ್ತು ರೋಮನ್) ಬೇರೆ ಬೇರೆ ಸ್ಥಳಗಳಲ್ಲಿ ಜೀವಿಸಿದರು.

ಈ ವಿವಿಧ ಜನರ ಬರಹಗಳು ಒಂದಾಗಿ ಕೂಡಿಸಲ್ಪಟ್ಟಾಗ, ಅವರ ಏಕತೆಯು ಆಶ್ಚರ್ಯಕರವಾದದ್ದಾಗಿತ್ತು. ಬೈಬಲಿನ ವಿಷಯಗಳು, ಘಟನೆಗಳು ಮತ್ತು ತತ್ವಗಳು ಲೇಖನಗಳನ್ನು ಒಂದು ಮಹಾಮನಸ್ಸು ಕ್ರೋಢೀಕರಿಸುತ್ತಿರುವದನ್ನು ಪ್ರತಿಬಿಂಬಿಸುತ್ತದೆ. ಬರಹಗಾರರ ಈ ಅದ್ವಿತೀಯ ಸಂಗ್ರಹದಲ್ಲಿ ಐಕ್ಯತೆಯ ಉದಾಹರಣೆಗಳ ಕಡೆಗೆ ನೋಡೋಣ.

### ಯೇಸು

ಪರಿಶುದ್ಧ ಲೇಖನಗಳ ಮುಖ್ಯ ಐಕ್ಯತೆಯು ಯೇಸುವು, ಯಾಕಂದರೆ ಪ್ರವಾದನೆಯ ಆತ್ಮವು ಯೇಸುವಿನ ಸಾಕ್ಷಿಯಾಗಿದೆ (ಪ್ರಕಟನೆ 19:10ಸಿ). ಬೈಬಲಿನ ಪ್ರತಿಯೊಂದು ಪುಸ್ತಕವು ಗಲಿಲಾಯದ ಮನುಷ್ಯನೊಂದಿಗೆ ಮತ್ತು ಮಾನವ ಜೀವಿಗಳಿಗೆ ಆತನ ಸಂಬಂಧದೊಂದಿಗೆ ಸಂಬಂಧಿಸಿದೆ. ತನ್ನ ಕುಮಾರನಲ್ಲಿ ಎಲ್ಲಾ ಸಂಗತಿಗಳನ್ನು ಒಂದುಗೂಡಿಸುವುದು ದೇವರಿಗೆ ಸಂತೋಷವುಳ್ಳದ್ದಾಗಿತ್ತು (ಎಫೆಸ 1:10). ಒಬ್ಬರು ಯೇಸುವಿನ ಬಗ್ಗೆ ಹೀಗೆ ಬರೆದಿದ್ದಾರೆ:

> ಆದಿಕಾಂಡದಲ್ಲಿ, ಶಿಲೋಹಿನಂತೆ. ವಿಮೋಚನಕಾಂಡದಲ್ಲಿ, ಪಸ್ಕದ ಕುರಿಮರಿಯಂತೆ. ಯಾಜಕ ಕಾಂಡದಲ್ಲಿ, ಯಜ್ಞದ ಪಶುವಿನಂತೆ. ಕೀರ್ತನೆಗಳಲ್ಲಿ, ಕುರುಬನಂತೆ. ಪರಮಗೀತಗಳಲ್ಲಿ, ಶಾರೋನಿನ ಗುಲಾಬಿಯಂತೆ ತಗ್ಗಿನ

> ತಾವರೆಯಂತೆ ಮತ್ತು ಹತ್ತು ಸಾವಿರ ಜನರಲ್ಲಿ ಶ್ರೇಷ್ಠನಂತೆ. ಯೋಬನಲ್ಲಿ, ದೀನನ ಮನುಷ್ಯನಂತೆ. ಯೆಶಾಯನಲ್ಲಿ, ಶ್ರಮೆ ಪಡುವ ಸೇವಕನಂತೆ. ದಾನಿಯೇಲನಲ್ಲಿ, ಪವಿತ್ರನಂತೆ. ಯೆರೆಮೀಯನಲ್ಲಿ, ಕೊಂಬೆಯಂತೆ. ಮತ್ತಾಯನಲ್ಲಿ, ಮೆಸ್ಸೀಯನಂತೆ. ಮಾರ್ಕನಲ್ಲಿ, ಅದ್ಭುತಗಳನ್ನು ಮಾಡುವವನಂತೆ. ಲೂಕನಲ್ಲಿ, ಕ್ರಿಸ್ತನಂತೆ. ಯೋಹಾನನಲ್ಲಿ, ವಾಕ್ಯದಂತೆ. ಅಪೊಸ್ತಲರ ಕೃತ್ಯಗಳಲ್ಲಿ, ಜೀವದ ರಾಜಕುಮಾರನಂತೆ. ರೋಮಾಪುರದಲ್ಲಿ, ವಿಮೋಚಕನಂತೆ. 1 ಕೊರಿಂಥದಲ್ಲಿ, ದೇವರ ಜ್ಞಾನದಂತೆ. 1 ಪೇತ್ರನಲ್ಲಿ, ಪ್ರಮುಖ ಹಿರಿಯನಂತೆ. ಪ್ರಕಟನೆಯಲ್ಲಿ, ಆದಿಯಂತೆ ಹಾಗೂ ಅಂತ್ಯದಂತೆ ಪ್ರವಾದಿಸಲ್ಪಟ್ಟದ್ದನ್ನು ನೋಡುತ್ತೇನೆ.[1]

**ಧರ್ಮಗಳ ಬೆಳವಣಿಗೆ**

ಬೈಬಲಿನ ಐಕ್ಯತೆಯ ಇನ್ನೊಂದು ಉದಾಹರಣೆಯು ಜನರೊಂದಿಗೆ ದೇವರ ವ್ಯವಹರಿಸುವಿಕೆಗಳಲ್ಲಿ ಅದು ಕೊಡುವ ಪ್ರಗತಿಪರ ಧರ್ಮಗಳ ಬೆಳವಣಿಗೆಯಾಗಿದೆ: ಮೊದಲು ಪಿತೃಗಳ ಆಳಿಕೆ, ಆಮೇಲೆ ಯೆಹೂದಿ ಧರ್ಮ ಮತ್ತು ಅಂತಿಮವಾಗಿ ಕ್ರೈಸ್ತತ್ವ. ಈ ಮೂರು ಯುಗಗಳು ಕುಟುಂಬ ಧರ್ಮವನ್ನು ರಾಷ್ಟ್ರೀಯ ಧರ್ಮವನ್ನು ಹಾಗೂ ಅಂತರ್ ರಾಷ್ಟ್ರೀಯ ಧರ್ಮವನ್ನು ಬೆಳೆಸಿವೆ. ಈ ಧಾರ್ಮಿಕ ಪದ್ಧತಿಗಳ ತಾರ್ಕಿಕ ಮತ್ತು ವಾತಾವರಣದ ಬೆಳವಣಿಗೆಯು ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ದಾಖಲೆ ಮಾಡಲ್ಪಟ್ಟಿವೆ, ಪ್ರಕಟಿತ ಧರ್ಮದ ಇಡೀ ವ್ಯಾಪ್ತಿಯ ಸ್ಪಷ್ಟವಾದ ಮತ್ತು ಐಕ್ಯತೆಯುಳ್ಳ ಚಿತ್ರವು ಕೊಡಲ್ಪಟ್ಟಿದೆ.

**ಮಾದಿರಿ ಹಾಗೂ ಸಾದೃಶ್ಯ**

ಪರಿಶುದ್ಧ ಬರಹಗಳಲ್ಲಿ ಐಕ್ಯತೆಯು ಕಂಡು ಬಂದ ವಿಶೇಷವಾದ ಉದಾಹರಣೆಯು ಮುಂಗುರುತುಗಳನ್ನೂ ಪ್ರತಿಗುರುತುಗಳನ್ನೂ ಉಪಯೋಗಿಸಿದ್ದು ಆಗಿರುವುದು, ಹಳೇ ಒಡಂಬಡಿಕೆಯ ಘಟನೆಗಳಿಗೆ ಹೊಸ ಒಡಂಬಡಿಕೆಯ ಅನ್ವಯವಿರುವುದು. ಒಂದು ಕನಸಿನಲ್ಲಿಯ ನಿಚ್ಚಣಿಕೆಯು ಯೇಸುವಿಗೆ ಸಾದೃಶ್ಯವಾಗಿತ್ತು. ಮೋಶೆಯಿಂದ ರಚಿಸಲ್ಪಟ್ಟ, ಸಾಗಿಸಲ್ಪಡುವ ಆಕೃತಿ ಮಾನವ ಹಸ್ತಗಳಿಂದ ಮಾಡದೇ ಇರುವ ಆತ್ಮಸಂಬಂಧವಾದ ಗುಡಾರಕ್ಕೆ ಸಂಕೇತವಾಗಿತ್ತು. ಪರಲೋಕದಿಂದ ಸುರಿಸಲ್ಪಟ್ಟ ಚಿಕ್ಕ ಬಿಳಿಯ ಆಹಾರ ಧಾನ್ಯಗಳು ಮನ್ನ ಎಂದು ಕರೆಯಲ್ಪಟ್ಟಿದ್ದು, ಯೇಸುವನ್ನು ಪ್ರತಿನಿಧೀಕರಿಸಿತು. ಅದ್ಭುತವಾದ ರೀತಿಯಲ್ಲಿ ಕೆಂಪು ಸಮುದ್ರವನ್ನು ದಾಟಿದ್ದು ಹೊಸ ಒಡಂಬಡಿಕೆಗೆ ಬಾಪ್ತಿಸ್ಮದ ಒಂದು ಮುಂಗುರುತಾಗಿತ್ತು (ನೋಡಿರಿ 1 ಕೊರಿಂಥ 10:2). ಹೆಂಡತಿ, ಆಕೆಯ ದಾಸಿ ಮತ್ತು ಅವರ ಗಂಡುಮಕ್ಕಳು ಎರಡು ಧರ್ಮಗಳನ್ನು ವಿವರಿಸುವದಕ್ಕಾಗಿ ಒಂದು ದೃಷ್ಟಾಂತವಾಗಿತ್ತು (ಗಲಾತ್ಯ 4:22-26). ಅರಸನಾಗಿದ್ದ ಒಬ್ಬ ಯಾಜಕನು ಕ್ರಿಸ್ತನ ಯಾಜಕತ್ವ ಮತ್ತು ಅರಸುತನಕ್ಕೆ ಪ್ರತಿಛಾಯೆಯಾಗಿದ್ದನು. ಹೀಗೆ ಮಾದರಿಗಳ ಮತ್ತು ಸಾದೃಶ್ಯಗಳ ಐಕ್ಯತೆಯು ಬಹಳ ನಿಕಟವಾಗಿದ್ದು, ಹಳೇ ಒಡಂಬಡಿಕೆಯು "ಹೊಸ ಒಡಂಬಡಿಕೆಯನ್ನು ಅಡಗಿಸಿಟ್ಟುಕೊಂಡಿತ್ತು" ಎಂದು ಕರೆಯಲ್ಪಟ್ಟಿತು ಮತ್ತು "ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯನ್ನು ಪ್ರಕಟಿಸಿತು" ಎಂದು ದೃಷ್ಟಿಸಲ್ಪಡಬಹುದಾಗಿದೆ.

**ಪೂರ್ತಿಗೊಂಡ ಕಥೆಗಳು**

ಬೈಬಲಿನ ಒಂದು ಭಾಗದಲ್ಲಿ ಪ್ರಾರಂಭಿಸಲ್ಪಟ್ಟ ವಿವರಗಳು ಕೆಲವು ಸಮಯ ಅಪೂರ್ಣವಾಗಿದ್ದು ಕೊನೆಯ ಪುಸ್ತಕದಲ್ಲಿ ಮುಕ್ತಾಯಗೊಳಿಸಲ್ಪಟ್ಟಿದೆ. ದೈವಿಕ ದಾಖಲೆಯಲ್ಲಿ ಮೊದಲು ನಮೂದಿಸಲ್ಪಟ್ಟ ಜೀವವೃಕ್ಷದ ಕಥೆಯು ಪ್ರಕಟಣೆ ಗ್ರಂಥದಲ್ಲಿ ಯೋಹಾನನಿಂದ ಮುಕ್ತಾಯಗೊಳಿಸಲ್ಪಟ್ಟಿದೆ. ಮೊದಲನೆಯ ತಾಯಿಯೊಂದಿಗೆ ಪ್ರಾರಂಭವಾದ ನೋವಿನ ಮತ್ತು ಕಣ್ಣೀರಿನ ಕಥೆಯು ಪ್ರತಿಯೊಂದು ಕಣ್ಣೀರು ತೆಗೆದು ಹಾಕಲ್ಪಡುವದರೊಂದಿಗೆ ಕೊನೆ ಹಂತ ತಲುಪಿದೆ. ಮೊದಲ ಪಾಪದೊಂದಿಗೆ ಪ್ರಾರಂಭ ವಾದ ಶಾಪಗಳ ಕಥೆಯು "ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ" (ಪ್ರಕಟನೆ 22:3) ಎಂಬ ದೈವಿಕ ಭರವಸೆಯೊಂದಿಗೆ ಪೂರ್ತಿಗೊಳಿಸಲ್ಪಟ್ಟಿದೆ. ಆದಾಮ, ಹವ್ವರು ಏದೆನ್ ತೋಟದಿಂದ - ಹೊರಗೆ ಹಾಕಲ್ಪಟ್ಟ ನಂತರ ಸ್ವಲ್ಪ ಸಮಯದಲ್ಲಿ ಪ್ರಾರಂಭ ವಾದ ಯಜ್ಞಗಳ ಚರಿತ್ರೆಯು ವಧಿತನಾದ ಕುರಿಮರಿಯಂತೆ ಕಾಣುವ ಯಹೂದ ಸಿಂಹದ ಪ್ರಕಟನೆಯ ಕಥೆಯು ಎದೆ ಜುಮ್ಮೆನ್ನುವ ಮುಕ್ತಾಯಕ್ಕೆ ತರಲ್ಪಟ್ಟಿದೆ (ಪ್ರಕಟನೆ 5:6)

**ಹೋಲಿಕೆಗಳು**

ಕರ್ತೃತ್ವದ ಮತ್ತು ಪರಿಸ್ಥಿತಿಯ ಬಹಳ ವಿವಿಧವಾದದ್ದರಿಂದ ಬರುವ, ಐಕ್ಯತೆಯು ವಿವರಿಸಲ್ಪಟ್ಟದ್ದಕ್ಕೆ ಹೋಲಿಕೆ ಮಾಡಿನೋಡುವಾಗ ಇನ್ನೂ ಹೆಚ್ಚಾಗಿ ಕಂಡು ಬರುತ್ತದೆ. ವಿವಿಧ ಗ್ರಂಥಕರ್ತರಿಂದ ಹದಿನೈದು ನೂರು ವರ್ಷಗಳ ಅವಧಿಗಿಂತ ಹೆಚ್ಚು ಸಮಯದಲ್ಲಿ ಮೂರು ಭಾಷೆಗಳಲ್ಲಿ ಬರೆದ ಪುಸ್ತಕಗಳ ಯಾವುದೇ ಗುಂಪನ್ನು ಒಬ್ಬನು ಅಯ್ಕೆಮಾಡಿಕೊಂಡರೆ, ಯಾವುದೇ ಸಂಬಂಧಿಸುವ ವಿಚಾರವನ್ನು ಕಂಡು ಕೊಳ್ಳುವಾಗ ಅತ್ಯಾಶ್ಚರ್ಯಪಡುವನು. ಪುರಾತನ ಗ್ರೀಕ್ ಬರಹಗಳು ಒಂದು ಗ್ರಂಥದಲ್ಲಿ ಇಡಲ್ಪಟ್ಟರೆ, ಅವುಗಳ ಐಕ್ಯತೆಯು ಸಾಮಾನ್ಯ ಗ್ರೀಕ್ ಗ್ರಂಥ ಕರ್ತೃತ್ವದಲ್ಲಿರುವುದು.

ಧರ್ಮದ ಇತರ ಪುಸ್ತಕಗಳೊಂದಿಗೆ ಹೋಲಿಸುವುದು ವಿವಿಧತೆಯ ಮಧ್ಯದಲ್ಲಿ ವಿಶೇಷವಾದ ಬೈಬಲಿನ ಐಕ್ಯತೆಯನ್ನು ಒತ್ತಿಹೇಳುವದನ್ನು ಮಾತ್ರ ಮಾಡುತ್ತದೆ. ಬೈಬಲ್ ಅಲ್ಲದ ಇತರ ಧಾರ್ಮಿಕ ಪುಸ್ತಕಗಳಲ್ಲಿ ಯಾವುದೇ ಐಕ್ಯತೆ ಕಂಡು ಬರುವದಿಲ್ಲ. ಮೊಹಮ್ಮದಿಯರ, ಝೊರೊ ಆಸ್ಟ್ರಿಯನ್ನರ, ಮತ್ತು ಬೌದ್ಧರ ಪರಿಶುದ್ಧ ಬರಹಗಳು ಎಂದು ಹೇಳಲ್ಪಡುವಂಥವುಗಳಲ್ಲಿ "ಯಾವುದೇ ಐಕ್ಯತೆಯಿರುವದಿಲ್ಲ. ಅವು ಭಿನ್ನ ವಿಷಯಗಳ ಸಂಗ್ರಹಗಳಾಗಿದ್ದು ... ಅವುಗಳಿಗೆ ಯಾವುದೇ ಕ್ರಮವಿಲ್ಲ, ಪ್ರಗತಿಯಿಲ್ಲ ಇಲ್ಲವೇ ಯೋಜನೆಯಿಲ್ಲ."[2]

ನಾಲ್ವತ್ತು ಶಿಲ್ಪಿಗಳಿಗೆ (ಅವರಲ್ಲಿ ಇತರರಿಗೆ ತಿಳಿಯದಿರುವ ಅನೇಕರಿಗೆ) ಪ್ರಮುಖ ಯೋಜನೆಯಿಲ್ಲದೆ ಒಂದು ಶಿಲಾಮೂರ್ತಿಯನ್ನು ಕೆತ್ತಲಿಕ್ಕಾಗುವದಿಲ್ಲವಾದರೂ ಆನಂದದಾಯಕವಾದ ಪರಿಣಾಮಗಳನ್ನು ಸಾಧಿಸಬಹುದು. ಹಾಗೆಯೇ ನಾಲ್ವತ್ತು ಜನ ಕಲಾಕಾರರು ಎಲ್ಲರ ಮೇಲ್ವಿಚಾರಕನು ಒಬ್ಬನಿಲ್ಲದೇ ಶ್ರೇಷ್ಠ ಕೃತಿಯೆಂದು ಹೊಗಲಲ್ಪಡುವ ಚಿತ್ರದ ಭಾಗವನ್ನು ರಚಿಸಲಾರರು. ಪಝಲಿನ (puzzle) ಭಾಗಗಳ ತಂಡುಗಳನ್ನು ಒಬ್ಬ ವ್ಯಕ್ತಿ ಮೇಲ್ವಿಚಾರಣೆ ಮಾಡದಿದ್ದರೆ ಅವು ಸರಿಯಾಗಿ ಹೊಂದಿಕೊಳ್ಳುವದಿಲ್ಲ. ಸೊಲೊಮೋನನ ದಿನಗಳಲ್ಲಿ ಅಕರ್ಷಕವಾದ ದೇವಾಲಯದೊಳಗೆ ಕಲ್ಲುಗಳು ಸುತ್ತಿಗೆಯ ಇಲ್ಲವೇ ಉಳಿಯ ಇಲ್ಲವೇ ಯಾವುದೇ ಕಬ್ಬಿಣದ ಉಪಕರಣದ ಪದವಿಲ್ಲದೇ ಜೋಡಿಸಲ್ಪಡಬೇಕಾಗಿದ್ದರೆ, ಅವು ಮುಂಚಿತವಾಗಿ ಯೋಚಿಸಿದ ನಿರೋಪಣೆಗಳಿಗನುಸಾರವಾಗಿ ಕಡಿಯಲ್ಪಟ್ಟಿರಬೇ ಕಾಗಿತ್ತು (1 ಅರಸು 6:7). ಈ ಹೋಲಿಕೆಗಳು ಬೈಬಲ್ ಎಂದು ಕರೆಯಲ್ಪಡುವ ಸಾಮರಸ್ಯದ ಅಸಾಮಾನ್ಯ ಕೃತಿಯಾಗಿರಲು ಒಬ್ಬ ಮೇಲ್ವಿಚಾರಕನ ಅಗತ್ಯತೆಯನ್ನು ಒತ್ತಿ

ಹೇಳುತ್ತವೆ. ವಿವಿಧ ಕಲಾಕಾರರಿಂದ ಒಂದು ಸಂಗೀತ ಉತ್ಪಾದನೆಗೆ ಯೋಚಿಸುವುದೂ ಸಂಪೂರ್ಣ ಮೇಲ್ವಿಚಾರಣೆಯೂ ಅಗತ್ಯವಾಗಿದ್ದರೆ, ಬೈಬಲಿನ ಸಾಮರಸ್ಯತೆಯು ಇದಕ್ಕಿಂತ ಕಡಿಮೆಯಾದದ್ದನ್ನು ಕೇಳುವದಿಲ್ಲ.

## ಅದರ ಸರಳತೆ ಮತ್ತು ಆಳ

ಬೈಬಲಿನ ಎರಡನೆಯ ವಿಶೇಷ ಗುಣವು ಅದರ ಅಲೌಕಿಕ ಮೂಲವನ್ನು ಸೂಚಿಸುವದರಲ್ಲಿ ಅದರ ಆಳವಾದ ಅರ್ಥಗಳೊಂದಿಗೆ ಕೂಡಿಕೊಂಡಿರುವ ಆಶ್ಚರ್ಯಕರವಾದ ಸಂಗತಿಯು ಯೋಸೇಫ, ದಾನಿಯೇಲ ಹಾಗೂ ಯೇಸುವಿನ ಬೈಬಲ್ ಕಥೆಗಳು ಸ್ಪಷ್ಟವಾಗಿ ಹೊಳೆಯುತ್ತಿರುವವು. ಸತತವಾದ ಓದುವಿಕೆಗಳಿಂದ, ಅವು ಯುವಕರ ಹಾಗೆಯೇ ಪ್ರೌಢರ ಗಮನವನ್ನು ಸೆಳೆಯುತ್ತವೆ. ಅದೇ ಸಮಯದಲ್ಲಿ ಬೈಬಲಿನ ಹೇಳಿಕೆಗಳನ್ನು ಅತ್ಯುತ್ತಮ ಮಾನವ ಮನಸ್ಸುಗಳು ಪುನಃ ಪುನಃ ಚರ್ಚಿಸುವದರಲ್ಲಿ ನಿರತವಾಗಿರುತ್ತವೆ. ರಕ್ಷಣೆಯ ಯೋಜನೆಯು ಬಹಳ ಸರಳವಾದದ್ದಾಗಿದೆ. ಅರ್ಥಮಾಡಿಕೊಳ್ಳದೇ ಇರುವವರು ವಿವೇಚನೆಯಿಲ್ಲದ ವರಾಗಿದ್ದಾರೆ (ಯೆಶಾಯ 35:8; ಎಫೆಸ 5:17); ಆದಾಗ್ಯೂ ಭವಿಷ್ಯದಲ್ಲಿ ಏನಿರುವುದು ಎಂಬುದರ ಬಗೆಗಿನ ಯೋಹಾನನ ದರ್ಶನಗಳನ್ನು ಯಾವ ಮಾನವನೂ ಪೂರ್ಣವಾಗಿ ಗ್ರಹಿಸಿಕೊಳ್ಳಲಾರನು. ಜ್ಞಾನದ, ಅದರ ಐಶ್ವರ್ಯಗಳ ಆಳಗಳು ಕಂಡು ಹಿಡಿಯಲ್ಪಡಲಾರವು (ರೋಮಾಪುರ 11:33). ಯೆಹೂದಿ/ಅನ್ಯರ ಪರಸ್ಪರ ಪ್ರಭಾವವು ಎಣ್ಣೇಮರದಲ್ಲಿ ಕಸಿಮಾಡಲ್ಪಟ್ಟಂತೆ ಚಿತ್ರಿಸಲ್ಪಟ್ಟದ್ದು ಅತ್ಯುತ್ತಮ ಮಾನವ ಮನಸ್ಸುಗಳಿಂದ ಪುನಃ ಪುನಃ ಸಂಶೋಧಿಸಲ್ಪಡಲು ಕಾರಣವಾಗಿದೆ (ರೋಮಾಪುರ 11:16-24).

ಇದು ಕ್ರಮಗೊಳಿಸಲ್ಪಟ್ಟ ಪುಸ್ತಕವಾಗಿರುವದಿಲ್ಲ, ಅದರ ನಿಯಮಗಳು ಕಾನೂನು ಬದ್ಧ ರೀತಿಯಲ್ಲಿ ಹೊಂದಿಸಲ್ಪಟ್ಟಿರುವದಿಲ್ಲ; ಆದಾಗ್ಯೂ ದೈವಭಕ್ತಿಗಾಗಿ ಹಾಗೂ ಒಳ್ಳೆಯದಕ್ಕಾಗಿ ಮತ್ತು ಸರಿಯಾಗಿರುವದಕ್ಕಾಗಿ ಮತ್ತು ದಯೆಗಾಗಿ ಹೃದಯಗಳ ಮೇಲೆ ಅದರ ಪರಿಣಾಮವು ತಪ್ಪಾದದ್ದಾಗಿರುವದಿಲ್ಲ. ಅನೇಕ ಸ್ಪಷ್ಟವಾದ ಕರ್ತವ್ಯಗಳನ್ನು ಅದು ಆಜ್ಞಾಪಿಸಿದರೂ ಅದರ ಕೇಂದ್ರೀಕರಣವು ದೇವರ ಕಡೆಗೆ ಮತ್ತು ಮಾನವರ ಕಡೆಗೆ ಪ್ರೀತಿಯ ಮಹಾ ತತ್ವದ ಮೇಲೆ ಇರುತ್ತದೆ. ಮಗುವಿನಿಂದ ಮತ್ತು ಪಿತೃವಿನಿಂದ ಇಬ್ಬರಿಂದಲೂ ಒಂದು ಪುಸ್ತಕವು ಮೆಚ್ಚಿಕೆಪಡಕೊಳ್ಳುವ ಸಂಗತಿಯು ಆ ಪುಸ್ತಕದ ಮಾನವ ಮೂಲಕ್ಕಿಂತ ಹೆಚ್ಚು ಉನ್ನತವಾದದ್ದನ್ನು ಸೂಚಿಸುತ್ತದೆ.

## ಅದರ ನಿಷ್ಪಕ್ಷಪಾತತೆ

ಬೈಬಲಿನ ದೈವಿಕ ಕರ್ತೃತ್ವದ ಮೂರನೆಯ ಪುರಾವೆಯು ಅದರ ಪ್ರಮುಖ ಪಾತ್ರಗಳ ನಿಷ್ಪಕ್ಷವಾದ ವಿವರಣೆಯಾಗಿದೆ. ಜೀವನ ಚರಿತ್ರೆಕಾರರು ಸಾಮಾನ್ಯವಾಗಿ ತಮ್ಮ ನಾಯಕರನ್ನು ಹೊಗಳುತ್ತಾರೆ, ಅವರ ತಪ್ಪುಗಳನ್ನು ಕಡಿಮೆ ಮಾಡುತ್ತಾರೆ, ಇಲ್ಲವೇ ಅವರ ಗುಣಲಕ್ಷಣಗಳ ಲೋಪದೋಷಗಳನ್ನು ಒತ್ತಿಹೇಳಿ ಅವರ ವಿಷಯಗಳನ್ನು ತಪ್ಪಾಗಿ ಪ್ರತಿನಿಧೀಕರಿಸುತ್ತಾರೆ. ಹೀಗಿದ್ದರೂ ಬೈಬಲಿನಲ್ಲಿ ಹೊಗ ಳುವುದಾಗಲೀ, ಖಂಡಿಸುವದಾಗಲೀ ಇರುವದಿಲ್ಲ. ಸಾಮಾನ್ಯವಾಗಿ ವಾಚಕರು ಚರ್ಚಿಸಿದಾಗ ಯೋಗ್ಯತೆಯನ್ನೂ ಅಯೋಗ್ಯತೆಯನ್ನೂ ಅಳೆಯುವವರಾಗಿದ್ದಾರೆ.

ಒಂದು ರೀತಿಯಲ್ಲಿ ಪಕ್ಷಪಾತವಿಲ್ಲದೇ ನೋಹನ ಹೊಗಳಿಕೊಳ್ಳುವ ಗುಣಗಳನ್ನು ಆಮೇಲೆ ಅವನ ಕುಡುಕತನವನ್ನು ಬೈಬಲ್ ಮುಂದಿಡುತ್ತದೆ. ಆದರ್ಶ ವರದಿಗಾರನಂತೆ ಬೈಬಲ್ ಬರಹಗಾರರು ದಾವೀದನ ಶ್ರೇಷ್ಠತನಗಳನ್ನೂ ಪಾಪಗಳನ್ನೂ ಮುಂದಿಡುತ್ತಾರೆ. ಪರಿಶುದ್ಧ ಲೇಖನೆಗಳು ಅಬ್ರಹಾಮನ ಆಳವಾದ ವಿಶ್ವಾಸವನ್ನು ವಿವರಿಸುತ್ತದೆ, ಆದರೆ ಅವನು ಫರೋಹನಿಗೆ ಸುಳ್ಳು ಹೇಳಿದ್ದನ್ನು ಅದು ಮುಚ್ಚಿಡುವದಿಲ್ಲ. ಸುವಾರ್ತೆಯ ಬರಹಗಾರರಿಗೆ ಪೇತ್ರನ ಕಡೆಗೆ ಬಲವಾದ ಭಾವನೆಗಳಿದ್ದಿರಬೇಕು. ಆದರೆ ಅವರ ವರದಿಗಳು ಅವನನ್ನು ಕುರಿತು ಕ್ರಿಸ್ತನ ಕಡೆಗಿದ್ದ ಅವನ ಭಕ್ತಿಭಾವ ಮತ್ತು ಆತನನ್ನು ಅಲ್ಲಗಳೆದದ್ದರ ಬಗ್ಗೆ ಸ್ಪಷ್ಟವಾದ ಘಟನೆಗಳನ್ನು ವರದಿ ಮಾಡಿದ್ದಾರೆ. ಯಾಕೋಬ ಮತ್ತು ಯೋಹಾನರ ವೈಯಕ್ತಿಕ ಹಿರಿಯಾಶೆಯನ್ನು ಕ್ರಿಸ್ತನಿಗೆ ಅವರ ಸಮರ್ಪಣೆಯ ಅದೇ ರೀತಿಯ ಸ್ಪಷ್ಟತೆಯೊಂದಿಗೆ ವಿವರಿಸಲ್ಪಡಲಾಗಿದೆ.

ಬೈಬಲ್ ಬರಹಗಳು ಯಾರನ್ನೂ ಮೆಚ್ಚಿಸಲು ಬರೆಯಲ್ಪಡಲಿಲ್ಲ. ಪಕ್ಷಿಪಾತಗಳಿಗೆ ಒಳಗಾಗಬಹುದಾಗಿದ್ದರೂ ಯಾರಿಗೂ ಮೆಚ್ಚಿಕೆ ತೋರಿಸದೇ ಬರೆದರು. ಪಕ್ಷಪಾತ ಗಳಾಗಲೇ ಇರುವ ಅವರ ಒಲವು ಇತರ ಜೀವನ ಚರಿತ್ರೆಗಾರರಿಂದ ಭಿನ್ನವಾಗಿರುತ್ತದೆ. ಹಾಗೂ ದೈವಿಕ ನಡಿಸಿಕೊಳ್ಳುವಿಕೆಯನ್ನು ಸೂಚಿಸುತ್ತದೆ.

## ಅದರ ಸಂಕ್ಷಿಪ್ತತೆ

ದೈವಿಕ ಕರ್ತೃತ್ವದ ಕಡೆಗೆ ತೋರಿಸುವ ಇನ್ನೊಂದು ಬೈಬಲಿನ ಗುಣಲಕ್ಷಣವು ಪ್ರಜ್ಞೆ. ಶುದ್ಧವಾದ ಮಾನವ ಬರಹಗಾರರು ಸಂಕ್ಷಿಪ್ತತೆಗಾಗಿ ತಮ್ಮ ಹುಡುಕುವಿಕೆಯಲ್ಲಿ ಸತತವಾದ ಹೋರಾಟ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಪರಿಶುದ್ಧ ಲೇಖಕರು ಬಹಳ ವಿಶಾಲವಾದ ಗೌರವ ಪಡೆದಿದ್ದಾರೆ. ವಿಶ್ವದ ಸೃಷ್ಟಿಯು ಕೇವಲ ಮೂವತ್ನಾಲ್ಕು ವಚನಗಳಲ್ಲಿ ಚಿತ್ರಿಸಲ್ಪಟ್ಟಿದೆ - ಒಂದು ಚಂಡಿನಾಟದ ಬಗ್ಗೆ ಸಾಮಾನ್ಯ ಸಮಾಚಾರ ಪತ್ರಿಕೆಯ ಲೇಖಕನು ವಿವರಿಸುವದಕ್ಕಿಂತಲೂ ಕಡಿಮೆ ಪದಗಳಲ್ಲಿ ಅದು ಇರುತ್ತದೆ. ಮಾನವ ಚರಿತ್ರೆಯ ಸುಮಾರು ಇಪ್ಪತ್ತೈದು ನೂರು ವರ್ಷಗಳ ಚರಿತ್ರೆಯು ಒಂದೇ ಒಂದು ಪುಸ್ತಕದಲ್ಲಿ ಆದಿಕಾಂಡದಲ್ಲಿ, ಐವತ್ತು ಅಧ್ಯಾಯಗಳಲ್ಲಿ ದಾಖಲೆ ಮಾಡಲ್ಪಟ್ಟಿದೆ.

ಯೇಸುವಿನ ಬಾಪ್ತಿಸ್ಮದ ವಿವರಣೆಯು ಕೇವಲ ಐದು ವಚನಗಳನ್ನು ತೆಗೆದು ಕೊಂಡಿದೆ, ಸಮುದ್ರವನ್ನು ಶಾಂತಗೊಳಿಸಿದ್ದು ಕೇವಲ ಐದು ವಚನಗಳಲ್ಲಿದೆ. ರೂಪಾಂತರವು ಎಂಟು ವಚನಗಳಲ್ಲಿ ವಿವರಿಸಲ್ಪಟ್ಟಿದೆ, ಮತ್ತು ಯೇಸುವಿನ ಮರಣದ ವಿವರವು ಕೇವಲ ಎರಡು ಅಧ್ಯಾಯಗಳಲ್ಲಿದೆ. ಹನ್ನೆರಡು ನೂರು ದಿನಗಳ ಯೇಸುವಿನ ಸೇವೆಯು ಮೂವತ್ನಾಲ್ಕು ದಿನಗಳ ಘಟನೆಗಳಲ್ಲಿ ಸಂಕ್ಷೇಪಿಸಲ್ಪಟ್ಟಿದೆ. ಸ್ತೆಫನನು, ಒಂದು ಅಧ್ಯಾಯದ ಪ್ರಸಂಗದಲ್ಲಿ ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆಯನ್ನು ಸಂಕ್ಷೇಪಿಸಿ ಹೇಳಿದ್ದಾನೆ. ಮೊದಲನೆಯ ಅಪೊಸ್ತಲನ ಮರಣವು KJVಯಲ್ಲಿ ಕೇವಲ ಹನ್ನೊಂದು ಪದಗಳಲ್ಲಿ ದಾಖಲೆ ಮಾಡಲ್ಪಟ್ಟಿದೆ (ಅಪೊಸ್ತಲರ ಕೃತ್ಯ 12:2).

ಅಂಥ ಕಥಾನಕಗಳಲ್ಲಿ ಮಾನವ ಒಲವು ವಿಸ್ತರಿಸುವದರ ಕಡೆಗೆ, ಹೆಚ್ಚು ಪದಗಳನ್ನು ಸೇರಿಸುವದರ ಕಡೆಗೆ ಇರುತ್ತದೆ. ಅಂಥ ಮಹತ್ವದ ಘಟನೆಯನ್ನು ಹೇಳುವದರಲ್ಲಿ ನಿರ್ಬಂಧವನ್ನು, ಸಂಕ್ಷಿಪ್ತತೆಯನ್ನು ತೋರಿಸುವುದು ಬಹಳವಾಗಿ ಕಠಿಣವಾದದ್ದಾಗುತ್ತದೆ. ಬೈಬಲ್ ವಚನವನ್ನು ಕೆಲವೇ ಪದಗಳಲ್ಲಿ ಬರೆಯುವ, ಅದೇ ಸಮಯದಲ್ಲಿ ಅರ್ಥವನ್ನು ಕಾದುಕೊಳ್ಳುವ ಆಹ್ವಾನ ಸ್ವೀಕರಿಸಲ್ಪಟ್ಟಿರುವದಿಲ್ಲ. ವಿಷಯವನ್ನು ಕೆಡಿಸದೇ ಸಂಕ್ಷೇಪಿಸುವಲ್ಲಿ ಬೈಬಲ್ ಬರಹಗಾರರ ಯಶಸ್ಸು ಮಾನವ

ಸಹಾಯಕ್ಕಿಂತ ಹೆಚ್ಚಿನದನ್ನು ಸೂಚಿಸುತ್ತದೆ.

## ಅದರ ನಿರ್ಬಂಧ

ಬೈಬಲಿನ ಬರಹಗಾರರ ನಿರ್ಬಂಧನೆಯು ಜನರನ್ನು ಆಶ್ಚರ್ಯಪಡುವಂತೆ ಮಾಡಿದೆ. ಬೈಬಲು ವಿಶೇಷ ಉದ್ದೇಶಕ್ಕಾಗಿ ಬರೆಯಲ್ಪಟ್ಟಿದೆ. ಹಾಗೂ ಆ ಉದ್ದೇಶವು ಮಾನವ ಕುತೂಹಲವನ್ನು ತೃಪ್ತಿಪಡಿಸುವದಕ್ಕಾಗಿರಲಿಲ್ಲ. ಅವರು ಸಾಮಾನ್ಯವಾದ ಬರಹಗಾರರಾಗಿದ್ದರೆ, ಪರಿಶುದ್ಧ ಲೇಖಕರು ಕಾಯಿನನ ಹೆಂಡತಿಯ ಪರಿಚಯದ ಬಗ್ಗೆ, ಮೋಶೆಯ ಹೂಣಿಡುವಿಕೆಯ ಸ್ಥಳದ ಬಗ್ಗೆ, ಯೇಸುವಿನ ಜೀವನದ ಹದಿನೆಂಟು ಮೌನವರ್ಷಗಳ ಬಗ್ಗೆ, ಯೇಸುವಿನ ವೈಯಕ್ತಿಕ ಕಾಣಿಸುವಿಕೆಯ ಬಗ್ಗೆ, ಯೋಹಾನ 8:6, 8ರಲ್ಲಿ ನೆಲದ ಮೇಲೆ ಆತನು ಬರೆದ ಪದಗಳ ಬಗ್ಗೆ, ಲಾಜರನ ಮರಣದ ನಾಲ್ಕು ದಿನಗಳಲ್ಲಿಯ ಅವನ ಅನುಭವದ ಬಗ್ಗೆ ಹಾಗೂ ಪರದೈಸದಲ್ಲಿ ಪೌಲನ ಪ್ರಯಾಣದ ಬಗ್ಗೆ ವಿವರಗಳನ್ನು ನಿಶ್ಚಯವಾಗಿಯೂ ಕೊಡುತ್ತಿದ್ದರು. ಈ ಘಟನೆಗಳ ವಿವರಣೆಗಳು ಲಭ್ಯವಾದರೆ, ತಡವಾದ ಈ ಸಮಯದಲ್ಲಿಯೂ ವರ್ತಮಾನ ಪತ್ರಿಕೆಯ ಪ್ರಮುಖ ಸಾಲುಗಳನ್ನು ಮಾಡುವವು; ಅತ್ಯುತ್ತಮವಾಗಿ ಮಾರಾಟವಾಗುವಂಥ ಪುಸ್ತಕಗಳಾಗಿ ಪ್ರಕಟಿಸಲ್ಪಡುವವು. ಬೈಬಲ್ ಬರಹಗಳು ಜೀವನದ ಬಗ್ಗೆ ಮತ್ತು ಭಕ್ತಿಯ ಬಗ್ಗೆ ಸಂಬಂಧಿಸಿ ಎಲ್ಲಾ ವಿಷಯಗಳನ್ನು ಕೊಡುವ ತಮ್ಮ ಉದ್ದೇಶಕ್ಕೆ ಅಂಟಿಕೊಂಡಿದ್ದು (2 ಪೇತ್ರ 1:3). ಹಾಗೂ ಮಾನವ ಕುತೂಹಲವನ್ನು ಪೂರೈಸಲು ಕಾರ್ಯ ಮಾಡದೇ ಇದ್ದದ್ದು, ಅದು ಬೈಬಲನ್ನು ಅದರ ಸ್ಥಾನದಲ್ಲಿಡುವಂತೆ ಮಾಡಿದೆ.

## ಅದರ ಸಾಹಿತಿಕ ಶ್ರೇಷ್ಠತೆ

ಬೈಬಲಿನ ಬರಹಗಳ ಸಾಹಿತ್ಯದ ಶ್ರೇಷ್ಠತೆಯು ಬೈಬಲಿನ ದೈವಿಕ ಮೂಲವನ್ನು ತೋರಿಸುವದಕ್ಕೆ ಇನ್ನೊಂದು ಗುಣಲಕ್ಷಣವಾಗಿದೆ. ತನ್ನ ದೈವಿಕ ಪ್ರತಿಪಾದನೆಗಳಲ್ಲದೇ ಬೈಬಲು ಸಾಹಿತ್ಯದ ರಚನೆಯಾಗಿ ಯೋಚಿಸಲ್ಪಡುವದರಲ್ಲಿ ಮೊದಲನೆಯ ಸ್ಥಾನ ಪಡೆದುಕೊಳ್ಳುತ್ತದೆ. "ಹಿಬ್ರೂ ಪ್ರವಾದಿಗಳು ರೂಪಗಳನ್ನು ಉಪಯೋಗಿಸುವದರಲ್ಲಿ ಪ್ರತಿಭಾವಂತಿಕೆಯನ್ನು ಪ್ರದರ್ಶಿಸಿದ್ದಾರೆ" ಅದು "ಬಬಿಲೋನ್ಯದಲ್ಲಿ, ಐಗುಪ್ತದಲ್ಲಿ ಇಲ್ಲವೇ ಬೇರೇ ಕಡೆಗಳಲ್ಲಿಯ ಕವಿಗಳಿಗಿಂತ ಹೆಚ್ಚು ಉತ್ತಮವಾದ ಸ್ಥಾನವನ್ನು ಅದು ಅವರಿಗೆ ಕೊಡುತ್ತದೆ" ಎಂದು ಒಬ್ಬ ಪಂಡಿತನು ಬರೆದಿದ್ದಾನೆ. ಯೋಬನ ಪುಸ್ತಕವು "ಆಪ್ತರ ಸಂಸ್ಕೃತಿಗಳಲ್ಲಿ ಸರಿಸಮಾನ ಮಾದರಿಗಳಗಿಂತ ಹೆಚ್ಚು ಉತ್ತಮವಾಗಿದೆ."

ಹೊಸ ಒಡಂಬಡಿಕೆಯನ್ನು ಕುರಿತು, ಲೂಕ ಮತ್ತು ಪೌಲನನ್ನು ಬಿಟ್ಟು ಬರಹಗಾರರು ಕಲಿತವರಾಗಿರಲಿಲ್ಲ (ನೋಡಿರಿ ಅಪೊಸ್ತಲರ ಕೃತ್ಯ 4:13). ಅಂಥ ಜನರು ಪುಸ್ತಕ ಬರೆಯುವುದು ಅದ್ಭುತವಾದದ್ದೇ ಸರಿ. ಕೆಲವು ಜನ ಬೆಸ್ತರು ತಮ್ಮ ಇಡೀ ಜೀವನವನ್ನು ತಮ್ಮ ಕೆಲಸಕ್ಕೆ ಹೊಂದಿಕೊಂಡಿದ್ದವರು ಯಾವುದೇ ತಪ್ಪುಗಳಿಲ್ಲದೇ ಏನನ್ನಾದರೂ ಬರೆಯಲು ಶಕ್ತರಾದರು, ಆದರೆ ಈ ಬೈಬಲ್ ಬರಹಗಾರರು ಇನ್ನೂ ಗೌರವ ಹೊಂದುತ್ತಿರುವ ಆತ್ಮ ಸಂಶಯವನ್ನೂ ಸ್ವಯಂಶಿಸ್ತನ್ನೂ ಪ್ರದರ್ಶಿಸಿದರು. ಸಾಹಿತ್ಯದ ಶ್ರೇಷ್ಠತೆಯು ಬೈಬಲಿನ ದೈವತ್ವವನ್ನು ಸಿದ್ಧಪಡಿಸಿ ತೋರಿಸುವದಿಲ್ಲ, ಆದರೆ ಅಂಥ ಗುಣಮಟ್ಟವು ಯಾವುದರ ಮೂಲವು ಪರಲೋಕದಲ್ಲಿರುವುದೆಂದು ಅಂಥ ಪುಸ್ತಕದಿಂದ ನಿರೀಕ್ಷಿಸಲ್ಪಡುತ್ತದೆ.

## ಅದರ ಪರಿಪೂರ್ಣತೆ

ಹೊಸ ಒಡಂಬಡಿಕೆಯು ಪರಿಪೂರ್ಣ ಧರ್ಮಶಾಸ್ತ್ರ ಎಂದು ಹೇಳಲ್ಪಟ್ಟಿದೆ (ಯಾಕೋಬ 1:25) ಮತ್ತು ಎರಡು ಸಾವಿರ ವರ್ಷಗಳ ನಂತರ ಈ ಹೇಳಿಕೆಯು ಕಳಂಕಗೊಂಡಿರುವುದಿಲ್ಲ. ಅದರ ಬೋಧನೆಗಳಿಂದ ಜೀವಿಸುವವರು ಯಾವ ಕೊರತೆಯೂ ಇಲ್ಲದಿರುವದನ್ನು ಹಾಗೂ ಸುಧಾರಿಸಬೇಕಾದ ಯಾವುದನ್ನೂ ಕಂಡು ಕೊಂಡಿರುವದಿಲ್ಲ.

ಯಾವುದೇ ಸಂಗತಿಯು ಮಾನವ ಮೂಲದ ಗುರುತ ಅದು ಸುಧಾರಿಸಲು ಸಾಧ್ಯತೆಯುಳ್ಳದ್ದು ಎಂಬುದು *McGuffey's Reader* ಮತ್ತು *Ray's Blueback Speller* ಎಂಬ ಅತ್ಯುತ್ತಮ ಅಮೇರಿಕನ್ ಶಾಲಾ ಪುಸ್ತಕಗಳೂ ಬಹಳ ದಿನಗಳ ಹಿಂದೆಯೇ ಬದಲಾಯಿಸಲ್ಪಟ್ಟವು; ಈ ಪಠ್ಯ ಪುಸ್ತಕಗಳಿಗೆ ಬದಲಿ ಪುಸ್ತಕಗಳು ಜಾರಿಯಲ್ಲಿವೆ. ದಿನಗಳ ಹಿಂದೆ ಕೆಮಿಸ್ಟ್ರೀ ಪುಸ್ತಕಗಳು ಆಟಮ್ ಕಣ್ಣಿಗೆ ಕಾಣುವದಿಲ್ಲ ಮತ್ತು ಮೂಲವಸ್ತುಗಳ ಪರಿವರ್ತನೆಯು ರಸಸಿದ್ಧಾಂತಿಗಳ ಅಸಾಧ್ಯವಾದ ಬಯಕೆ ಎಂದು ಬೋಧಿಸಿದವು. ಈಗ ಆ ಕೆಮಿಸ್ಟ್ರೀ ಪುಸ್ತಕಗಳು ವಸ್ತು ಸಂಗ್ರಹಾಲಯದ ತುಣುಕುಗಳಾಗಿವೆ.

ತಲತಾಲಂತರಗಳಿಂದ ಬೈಬಲು ಬದಲಾಗದ ಪುಸ್ತಕವಾಗಿದೆ. ಅದನ್ನು ತಿದ್ದಿ ಪುನಃ ಪ್ರಕಟಿಸುವ ಅಗತ್ಯತೆಯೇ ಇರುವದಿಲ್ಲ. ಅನೇಕರು ಬೈಬಲಿಗಿಂತ ಹೆಚ್ಚಾದದ್ದನ್ನು ತಿಳಿದು ಕೊಂಡಿದ್ದೇವೆಂದು ಕಲ್ಪಿಸಿಕೊಂಡರು ಆದರೆ ಅವರ ಹೊಸ ಬೋಧನೆಯು ಬೈಬಲು ತಪ್ಪದೇ ಸಾಧಿಸುವದನ್ನು ಜನರಿಗಾಗಿ ಏನೂ ಮಾಡುವದಿಲ್ಲ. ಬೈಬಲು ಸಂಪೂರ್ಣ ವಾಗಿ ಮಾನವ ಮೂಲವಾಗಿದ್ದರೆ, ಅದು ಎಂದೂ ಬದಲಾವನೆಯ ಅವಶ್ಯಕತೆಗಳು ಇಲ್ಲದ ಮತ್ತು ತಿದ್ದು ಪಡಿಸುವ ಅಗತ್ಯತೆಯಿಲ್ಲದ ಯಾವುದೇ ಮಾನವ ಪ್ರಥಮ ಉದಾಹರಣೆಯಾಗುವುದು.

ಸಭೆಯ ವಿಶ್ವಾಸ ಪ್ರಮಾಣಗಳು ಬೈಬಲಿನ ಮೇಲೆ ಅವಲಂಭಿಸಿದ್ದರೂ ಹಾಗೂ ಪಂಡಿತರಿಂದ ಬರೆಯಲ್ಪಟ್ಟಿದ್ದರೂ, ಅವು ಪುನಃ ಬದಲಾಯಿಸಲ್ಪಟ್ಟಿವೆ. ಇವು ಪರಿಶುದ್ಧಾತ್ಮ ನಿಂದ ಪ್ರೇರಿಸಲ್ಪಟ್ಟ ಜನರಿಂದ ಬರೆಯಲ್ಪಡದೇ ಇರುವದರಿಂದ ಇದು ನಿರೀಕ್ಷಿಸಲ್ಪಟ್ಟಿದೆ. ಪರಿಷ್ಕರಣೆಗಳಿಲ್ಲದೇ ಬೈಬಲು ಪ್ರತಿಯೊಂದು ದೇಶದಲ್ಲಿ ಹೊಸತನವನ್ನೂ ಗೌರವವನ್ನೂ ಕಾದಿಟ್ಟುಕೊಂಡಿರುವ ಸಂಗತಿಯು ಅದನ್ನು ಅದ್ವಿತೀಯವಾದದ್ದನ್ನಾಗಿ ಮಾಡುತ್ತದೆ ಮತ್ತು ವಿವರಣೆಯ ಅಗತ್ಯತೆಯನ್ನು ಹೊಂದಿದೆ.

## ಅದರ ನಾಶವಾಗದಿರುವಿಕೆ

ಅಂತಿಮವಾಗಿ, ಬೈಬಲಿನ ದೈವಿಕ ಕಾಪಾಡುವಿಕೆಯನ್ನು ತೋರಿಸುವ ಚರಿತ್ರೆಯನ್ನು ಯೋಚಿಸಿರಿ; ಶತಮಾನದ ಧ್ವಂಶಮಾಡುವಿಕೆಯಲ್ಲಿಯೂ ಬೆಂಕಿಯಿಂದ ಶೋಧಿಸಲ್ಪಡುವದರಲ್ಲಿಯೂ ಅಸ್ತಿತ್ವದಲ್ಲಿ ಉಳಿಯುವುದರಲ್ಲಿ ಅದರ ಸಾಮರ್ಥ್ಯವು ಆಶ್ಚರ್ಯವನ್ನುಂಟು ಮಾಡಿದೆ. ಪುಸ್ತಕಗಳು ಹಿಂಸಿಸಲ್ಪಡದೇ ಇದ್ದರೂ ಅವು ಬರೆಯಲ್ಪಟ್ಟ ಸಂತತಿಯಲ್ಲಿ ಅಲ್ಪ ಶತಭಾಗ ಮಾತ್ರ ಉಳಿದು ಕೊಳ್ಳುತ್ತದೆ. ಅದ್ವಿತೀಯವಾಗಿ ಬೈಬಲು ಹೊಸತನವನ್ನು ಪ್ರತಿಯೊಂದು ಹೊಸ ಸಂತತಿಗೆ ಸಮಂಜಸತೆಯನ್ನು ಒದಗಿಸುತ್ತದೆ.

ಬೈಬಲನ್ನು ಉತ್ಪಾದಿಸಿದ ದೇಶವು ಇತರ ಪುಸ್ತಕಗಳನ್ನು ಉತ್ಪಾದಿಸಿತು, ಆದರೆ ಅವು ಉಳಿಯಲಿಲ್ಲ. ಅವುಗಳ ಬಗ್ಗೆ ತಿಳುವಳಿಕೆಯು ಹಳೇ ಒಡಂಬಡಿಕೆಯು ಅವುಗಳ ಉಲ್ಲೇಖ ಮಾಡಿದ್ದರಿಂದ ನಮಗೆ ಲಭ್ಯವಿದೆ (ನೋಡಿರಿ. ಅರಣ್ಯಕಾಂಡ 21:14; ಯೆಹೋಶುವ 10:13). ಉಳಿದು ಕೊಂಡಿರುವ ಯಹೂದಿ ಅಪೊಕ್ರಿಫಲ್ ಪುಸ್ತಕಗಳು ಬೈಬಲಿಗೆ ಸಂಬಂಧಿಸಿದ್ದರಿಂದ

ಈಗಲೂ ತಮ್ಮ ಅಸ್ತಿತ್ವ ಕಳೆದುಕೊಂಡಿರುವದಿಲ್ಲ. ಒಬ್ಬರು ಹೀಗೆ ಬರೆದಿದ್ದಾರೆ:

> ಕೈಸರನ ಸಾಮ್ರಾಜ್ಯ ಹೊರಟುಹೋಗಿದೆ; ರೋಮನ್ ಸೇನಾದಳಗಳು ಧೂಳಿನಲ್ಲಿ ಸುಟ್ಟು ಹೋಗಿವೆ; ಯುರೋಪಿನ ಮೇಲೆ ನೆಪೋಲಿಯನ್‌ನು ಸುರಿಸಿದ ಹಿಮವು ಕರಗಿಹೋಗಿದೆ; ಫರೋಹನ ಅರಸ ಕುಮಾರನು ಬಿದ್ದು ಹೋಗಿದ್ದಾನೆ; ತಮ್ಮ ಸಮಾಧಿಗೋಸ್ಕರ ಅವರು ಕಟ್ಟಿದ ಪಿರಮಿಡುಗಳು ದಿನದಿನವೂ ಮರುಭೂಮಿಯ ಉಸುರಿನಲ್ಲಿ ಮುಳುಗಿ ಹೋಗುತ್ತಲಿವೆ; ತೂರಿನ ಬಂಡೆಯು ಬೆಸ್ತರು ಬಲೆಗಳನ್ನು ಒಣಗಿಸುವ ಸ್ಥಳವಾಗಿದೆ; ಆದರೆ ದೇವರ ವಾಕ್ಯವು ಇನ್ನೂ ಉಳಿದು ಕೊಂಡಿರುತ್ತದೆ. ಅದನ್ನು ನಂದಿಸಲು ಪ್ರಯತ್ನಿಸಿದ ಎಲ್ಲಾ ಸಂಗತಿಗಳು ಅದಕ್ಕೆ ಸಹಾಯ ಮಾಡಿವೆ. ಮಾನವರು ಕಟ್ಟುವ ಉನ್ನತ ಸ್ಮಾರಕವು ಹೇಗೆ ಕ್ಷಣಿಕವಾದದ್ದಾಗಿದೆ ಎಂಬುದನ್ನು, ದೇವರು ಮಾತನಾಡಿದ ಕನಿಷ್ಠಮಾತು ಹೇಗೆ ಸಹಿಸಿಕೊಂಡಿದೆ ಎಂಬುದನ್ನು ಸಿದ್ಧಪಡಿಸಿ ತೋರಿಸುತ್ತದೆ.[3]

ಜನಾಂಗಗಳು ಏಳುವವು ಹಾಗೂ ಬೀಳುವವು. ಆದರೆ ಬೈಬಲು ಜೀವಿಸುತ್ತಲೇ ಹೋಗುವುದು. ಪೌಲನನ್ನು ಕೊಲ್ಲುವದರಲ್ಲಿ ನೀರೋ ಯಶಸ್ವಿಯಾದನು; ಆದರೆ ಇಂದು ನೀರೋ ಹಾಗೂ ಅವನ ಸಾಮ್ರಾಜ್ಯ ಸತ್ತುಹೋಗಿದೆ. ರೋಮಿನಲ್ಲಿ ಪೌಲನು ಇದ್ದ ಸೆರೆಮನೆಯು ಅಸ್ತಿತ್ವದಲ್ಲಿ ಇಲ್ಲವಾಗಿ ಹೋಗಿದೆ. ಆದರೆ ಪೌಲನ ಸೆರೆಯ ಪತ್ರಿಕೆಗಳು ಇನ್ನೂ ಜೀವಿಸುತ್ತಿವೆ ಮತ್ತು ಚುರುಕಾಗಿವೆ.

ಪರಿಶುದ್ಧ ಬರಹದ ಎಲ್ಲಾ ಪ್ರತಿಗಳೂ ನಾಶಪಡಿಸಲ್ಪಡಬೇಕೆಂದು ಕ್ರಿ.ಶ. 303ರಲ್ಲಿ ಚಕ್ರವರ್ತಿ ಡಿಯೋಕ್ಲೆಷಿಯನ್ ಆಜ್ಞೆ ಮಾಡಿದನು. ಅವನ ಸಿಪಾಯಿಗಳೂ ತನಿಖೆ ಮಾಡುವವರೂ ಯಶಸ್ವಿಯಾದರೆಂದು ಅವನು ಯೋಚಿಸಿದನು. ತಾನು ಸಾಧಿಸಿದೆನೆಂದು ಯೋಚಿಸಿದ ಸಾಧನೆಯನ್ನು ಆಚರಿಸಲು, ಅವನು ಈ ಮಾತುಗಳಿಂದ ಒಂದು ಮೆಡಲನ್ನು ಮಾಡಿದನು. ಅದರಲ್ಲಿ *"ಕ್ರೈಸ್ತತ್ವ ನಾಶಪಡಿಸಲ್ಪಟ್ಟಿದೆ ಹಾಗೂ ದೇವತೆಗಳ ಆರಾಧನೆ ಪುನಃ ಸ್ಥಾಪಿಸಲ್ಪಟ್ಟಿದೆ"* ಎಂದಿತ್ತು. ಅನಂತರ ಬೈಬಿಲು ಸುಡಲ್ಪಟ್ಟ ಸ್ಥಳದಲ್ಲಿ "ಕ್ರೈಸ್ತರ ಹೆಸರು ಅಳಿದು ಹೋಗಿದೆ" ಎಂಬ ಮಾತುಗಳಿಂದ ಸ್ಮಾರಕ ಸ್ಥಂಬವನ್ನು ನಿಲ್ಲಿಸಿದನು. ಅವನು ಪ್ರಯತ್ನಗಳನ್ನು ಮಾಡಿದಾಗ್ಯೂ, ಪರಿಶುದ್ಧ ಬರಹದ ಪ್ರತಿಗಳು ಪುನಃ ಕಂಡು ಬಂದವು ಮತ್ತು ಸಂಖ್ಯೆಯಲ್ಲಿ ಹೆಚ್ಚಾದವು. ಇಪ್ಪತ್ತು ವರ್ಷಗಳ ನಂತರ ಇನ್ನೊಬ್ಬ ರೋಮನ್ ಚಕ್ರವರ್ತಿ ಕಾನ್‌ಸ್ಟಂಟೈನನು ಸಾಮ್ರಾಜ್ಯದಲ್ಲಿಯ ಪ್ರತಿಯೊಂದು ದೇವಾಲಯದಲ್ಲಿ ಬೈಬಲುಗಳನ್ನಿಡಲು ಪ್ರಾರಂಭಿಸಿದನು. ಬೈಬಲು ನಾಶವಾಗದಿರುವಿಕೆಯನ್ನು ಘೋಷಿಸುತ್ತದೆ (1 ಪೇತ್ರ 1:23). ಬಲಶಾಲೀ ರೋಮ್ ಸಾಮ್ರಾಜ್ಯದ ಮೇಲೆ ಈ ಜಯವು, ಅದರ ಘೋಷಣೆಯು ವ್ಯರ್ಥವಾದ ಹೊಗಳಿಕೆಯಾಗಿರುವದಿಲ್ಲ ಎಂಬುದನ್ನು ಪ್ರದರ್ಶಿಸುತ್ತದೆ.

ಪರಿಶುದ್ಧ ಬರಹಗಳಿಗೆ ವಿರುದ್ಧವಾಗಿ ದೈಹಿಕ ಹಿಂಸೆಯಲ್ಲದೇ, ಅವಿಶ್ವಾಸಿಗಳು ಸ್ಥಿರವಾಗಿರುವ ಬೈಬಲಿನ ಘೋಷಣೆಗೆ ಕಳಂಕ ತರಲು ಪ್ರಯತ್ನಿಸಿದ್ದಾರೆ (ಯೆಶಾಯ 40:8; ಮತ್ತಾಯ 24:35; ಮಾರ್ಕ 13:31; ಲೂಕ 21:33). 1778ರಲ್ಲಿ ಸತ್ತುಹೋದ, ಗರ್ವಿಯಾದ ವೋಲ್ಟೇರನು ಬೈಬಲಿಗೆ ವಿರುದ್ಧವಾದ ಅವನ ದಾಳಿಗಳು ಒಂದು ನೂರು ವರ್ಷಗಳೊಳಗೆ ಬೈಬಲು ಸಂಪೂರ್ಣವಾಗಿ ಇಲ್ಲವಾಗಿ ಹೋಗುವದಕ್ಕೆ ನಡಿಸುವವು ಎಂದು ಮುಂತಿಳಿಸಿದನು. "ಕ್ರೈಸ್ತತ್ವವನ್ನು ಪ್ರಾರಂಭಿಸಲು ಹನ್ನೆರಡು ಜನ ಬೇಕಾದರು. ಒಬ್ಬನು ಅದನ್ನು ನಾಶಪಡಿಸುವನು" ಎಂದು ಅವನು ಜಂಭಕೊಚ್ಚಿಕೊಂಡನು. ಹೀಗಿದ್ದರೂ ಅವನು ಸತ್ತುಹೋದಕೂಡಲೇ, ದಿ ಬ್ರಿಟೀಶ್ ಆಂಡ್ ಫಾರಿನ್ ಬೈಬಲ್

ಸೊಸೈಟಿಯು ಸ್ಥಾಪಿಸಲ್ಪಟ್ಟಿತು; ಫೋಲ್ಟೇರನ ಬರಹದ ಕೋಣೆಯನ್ನು ಬೈಬಲುಗಳಿಗಾಗಿ ಸಂಗ್ರಹ ಕೋಣೆಯನ್ನಾಗಿ ಅಚ್ಚುಹಾಕಿದ ಅದೇ ಮುದ್ರಣಾಲಯಗಳು ಬೈಬಲ್ ಪ್ರತಿಗಳನ್ನು ಅಚ್ಚುಹಾಕಲು ಉಪಯೋಗಿಸಲ್ಪಟ್ಟವು.

1809ರಲ್ಲಿ ಸತ್ತುಹೋದ ಥೋಮಸ್ ಪೈನನು *Age of Reason* ಎಂಬ ತನ್ನ ಅಪಖ್ಯಾತ ಪುಸ್ತಕದ ಮುಖಾಂತರ ಬೈಬಲಿನ ಮೇಲೆ ದಾಳಿಮಾಡುವದರಲ್ಲಿ ಗರ್ವಿಯಾಗಿದ್ದು, "ಇಂದಿನಿಂದ ಐವತ್ತು ವರ್ಷಗಳಲ್ಲಿ ಬೈಬಲು ನಾಶವಾಗುವುದು ಮತ್ತು ಮರೆತು ಹೋಗುವುದು" ಎಂದು ಕೊಚ್ಚಿಕೊಂಡನು. ಪುನಃ, ಅವನ ಪುಸ್ತಕವನ್ನು ಮುದ್ರಿಸಿದ ಮುದ್ರಣಾಲಯವು ಸಾವಿರಾರು ಬೈಬಲುಗಳನ್ನು ಮುದ್ರಿಸಲು ಉಪಯೋಗಿಸಲ್ಪಟ್ಟಿತು.

ಬೇರೆ ಯಾವುದೇ ಪುಸ್ತಕವು ಬೈಬಲ್ ಎದುರಿಸಿದಂಥ ದಾಳಿಯನ್ನು ಎದುರಿಸಿರುವದಿಲ್ಲ. "ಅದಿನ್ನೂ ಹಿಂಸಿಸಲ್ಪಡುತ್ತಲಿದೆ, ಧ್ವಂಶಪಡಿಸಲ್ಪಡುತ್ತಲಿದೆ ಹಾಗೂ ಅಪಾರ್ಥ ಮಾಡಲ್ಪಡುತ್ತಲಿದೆ; ಆದರೂ ಉಳಿದು ಕೊಂಡಿರುತ್ತದೆ. ಅದು ಉಳಿದೇ ಉಳಿಯುವುದು, ಅದಕ್ಕೆ ನಮ್ಮ ಆಧುನಿಕ ಸಾಹಿತ್ಯದ ಸಂಶೋಧನೆಗೆ ಯಾವ ಗೌರವ ಸಲ್ಲುವದಿಲ್ಲ." ಕೇವಲ ಮಾನವ ಮೂಲದ ಪುಸ್ತಕವು ಪರಿಶುದ್ಧ ಬರಹಕ್ಕೆ ವಿರುದ್ಧವಾಗಿ ತಂದ ದುಷ್ಟ ದಾಳಿಗಳಿಂದ ಉಳಿಯಲ್ಪಟ್ಟಿರುತ್ತಿರಲಿಲ್ಲ.

> ನಿನ್ನೆ ಸಾಯಂಕಾಲ ಕಮ್ಮಾರನ ಬಾಗಿಲ ಬಳಿ ತಡೆದೆನು, ಬಡಿಗಲ್ಲು ಸಾಯಂಕಾಲದ ಪ್ರಾರ್ಥನಾ ಗಂಟೆಗಳಂತೆ ಮಾಡಿದ ಪದ ಕೇಳಿದೆನು, ಒಳಗೆ ನೋಡಿದಾಗ ನೆಲದ ಮೇಲೆ ನೋಡಿದೆನು, ವರ್ಷಗಳ ಕಾಲ ಬಡಿಯುವಿಕೆಯಿಂದ ಸವೆದು ಹೋದ ಹಳೇ ಸುತ್ತಿಗೆಗಳನ್ನು "ಎಷ್ಟು ಬಡಿಗಲ್ಲುಗಳು ಇದ್ದವು ನಿನಗೆ" "ಈ ಎಲ್ಲಾ ಸುತ್ತಿಗೆಗಳನ್ನು ಸವೆಯಿಸಲು ಬಡಿಯಲು?" ಎಂದು ಕೇಳಿದೆ "ಒಂದೇ ಒಂದು" ಅವನು ಉತ್ತರಿಸಿದ, ಆ ಮೇಲೆ ಹೊಳೆಯುವ ಕಣ್ಣುಗಳಿಂದ "ಬಡಿಗಲ್ಲು ಸವೆಯಿಸುವುದು ಸುತ್ತಿಗೆಗಳನ್ನು, ತಿಳಿದುಕೋ ನೀನಿದನ್ನು." ಹೀಗೆ ನಾನು ಯೋಚಿಸಿದೆನು, ದೇವರ ವಾಕ್ಯದ ಬಡಿಗಲ್ಲನ್ನು,ಯುಗಗಳಿಂದ ನಾಸ್ತಿಕರ ಹೊಡೆತಗಳು ಅದರ ಮೇಲೆ ಬಿದ್ದಿರುವದನ್ನು, ಆದರೆ ಬೀಳುತ್ತಿರುವ ಹೊಡೆತದ ಧ್ವನಿ ಕೇಳಿದರೂ ಬಡಿಗಲ್ಲು ಬದಲಾಗಿರುವದಿಲ್ಲ, ಸುತ್ತಿಗೆಗಳು ಹೋಗಿರುವವು.[4]

## ಮುಕ್ತಾಯ

ಬೈಬಲಿನ ಮೆಚ್ಚಿಕೆಯ ಗುಣಲಕ್ಷಣಗಳು ಅದರ ಪ್ರಕಾಶಮಯವಾದ ಸರಳತೆ, ಅದರ ಪಕ್ಷಪಾತ ರಹಿತತೆ, ಅದರ ಸಂಕ್ಷಿಪ್ತತೆ, ಅದರ ನಿರ್ಬಂಧನೆ, ಅದರ ಸಾಹಿತ್ಯದ ಶ್ರೇಷ್ಠತೆ, ಅದರ ಪರಿಪೂರ್ಣತೆ ಮತ್ತು ಅದರ ನಾಶವಾಗದಿರುವಿಕೆ. ಕೆಲವು ಮಾನವ ಪುಸ್ತಕಗಳು ಈ ಎಂಟು ಶ್ರೇಷ್ಠ ಗುಣಗಳಲ್ಲಿ ಒಂದನ್ನು ಇಲ್ಲವೇ ಹೆಚ್ಚಾದವುಗಳು ಹೊಂದಿಕೊಂಡಿರುತ್ತವೆ. ಆದರೆ ಒಂದೇ ಒಂದು ಪುಸ್ತಕ ಆ ಎಲ್ಲಾ ಎಂಟೂ ಲಕ್ಷಣಗಳನ್ನೂ ಹೊಂದಿರುತ್ತದೆ. ಆ ಸಂಗತಿಯು ತಾನೇ ಬೈಬಲ್ ಯಾವುದೇ ಮಾನವ ಮೌಲ್ಯದ್ದಲ್ಲ ಎಂಬುದಕ್ಕೆ ಬಲವಾದ ಪುರಾವೆಯಾಗಿದೆ.

---

ಟಿಪ್ಪಣಿಗಳು

[1]Anonymous. [2]James Orr, ed., "Bible" in *The International Standard Bible Encyclopedia* (Grand Rapids, Mich.: Wm. B. Ederdmans Publishing Co., 1955),

1:467. [3]Author unknown. [4]John Clifford, "God's Word," in *Masterpieces of Religious Verse,* ed. James Dalton Morrison (New York: Harper & Brothers, 1948), 493.

© 2009 Truth for Today